



ದಾವಣಗೆರೆ ಬೆಣ್ಣೆದೋಸೆ ಬಗ್ಗೆ ಪದ್ಯ ಬರೆದು, ಅದಕ್ಕೆ ಎಐ ಸಂಗೀತ ಸಂಯೋಜನೆ ಮಾಡಿದೆ. ಅದ್ಭುತವಾಗಿ ಬಂತು. ಒಂದು ಸಣ್ಣ ಪದ್ಯ ಇಷ್ಟು ಅದ್ಭುತವಾಗಿ ಮೂಡಿಬಂದಿರುವಾಗ ಮೇರು ವ್ಯಕ್ತಿಗಳು ರಚಿಸಿದ ಕನ್ನಡ ಸಾಹಿತ್ಯದ ಪದ್ಯಗಳಿಗೆ ಎಐ ಸ್ಪರ್ಶ ನೀಡಿದರೆ ಇನ್ನೂ ದೊಡ್ಡ ಮಟ್ಟದಲ್ಲಿ ರೂಪಿತವಾಗಬಹುದು ಎಂದೆನಿಸಿತು. ಅದು ನಮ್ಮನ್ನು ಇಲ್ಲಿಯವರೆಗೆ ತಂದು ನಿಲ್ಲಿಸಿದೆ.

**-ಗಣೇಶ್ ಕೆ. ದಾವಣಗೆರೆ,**

ಸಹಾಯಕ ಪ್ರಾಧ್ಯಾಪಕ





## ಆಲೋಚನೆ ಹುಟ್ಟಿದ್ದು ಹೇಗೆ?

ಕನ್ನಡ ಸಾಹಿತ್ಯದಲ್ಲಿ 4ನೇ ಶತಮಾನದಿಂದ 20ನೇ ಶತಮಾನದವರೆಗಿನ ಸಮಗ್ರ ಹಾಗೂ ಸಮೃದ್ಧ ಸಾಹಿತ್ಯದ ಹೂರಣವಿದೆ. ಸಾಹಿತ್ಯ ಎಂದಾಕ್ಷಣ ದೂರ ಸರಿಯುವ ಇಂದಿನ ಜನ ಸಾಮಾನ್ಯರಲ್ಲಿ ಈ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯ ಆಗಬೇಕಿದೆ. ಅದೂ ಸಂಗೀತದ ಮೂಲಕವಾದರೆ ಜನರಿಗೆ ಆಪ್ತವಾಗುತ್ತದೆ ಎನ್ನುವ ಆಲೋಚನೆ ಗಣೇಶ್ ಹಾಗೂ ಸೋಮಶೇಖರ್ ನಡುವಿನ ಮಾತುಕತೆ ವೇಳೆ ವ್ಯಕ್ತವಾಗುತ್ತದೆ. ಸಣ್ಣದಾಗಿ ಹುಟ್ಟಿಕೊಂಡ ಈ ಆಲೋಚನೆಯ ಮುಂದುವರೆದ ಭಾಗವೇ 'ಸಂಗೀತ ಸುಧಾ'.

ಕನ್ನಡದ ಪದ್ಯಗಳಿಗೆ, ಕವನಗಳಿಗೆ, ವಚನಗಳಿಗೆ ಸಂಗೀತ ಸಂಯೋಜನೆ ಮಾಡುವುದು ಹೇಗೆ ಎನ್ನುವ ಪ್ರಶ್ನೆ ಎದುರಾದಾಗ ಈ ತಂಡಕ್ಕೆ ಕಂಡಿದ್ದು ಕ್ಷಣಾರ್ಧದಲ್ಲಿ ಸಂಗೀತ ಸೃಷ್ಟಿಸುವ ಜನರೇಟಿವ್ ಎಐ. ಮೊದಲ ಹಂತವಾಗಿ ಗಣೇಶ್ ಅವರು ದಾವಣಗೆರೆ ಬೆಣ್ಣೆ ದೋಸೆ ಬಗ್ಗೆ ಸಣ್ಣ ಪದ್ಯವೊಂದನ್ನು ರಚಿಸಿ, ಅದಕ್ಕೆ ಎಐ ಮೂಲಕ ಸಂಗೀತ ಸಂಯೋಜನೆ ಮಾಡಿ ವಿಡಿಯೊ ರೂಪವಾಗಿ ಸೃಷ್ಟಿಸುತ್ತಾರೆ. ಆ ವಿಡಿಯೊ ಬಗ್ಗೆ ಪ್ರಶಂಸೆಗಳು ವ್ಯಕ್ತವಾಗುತ್ತವೆ. ಅದರಿಂದ ಪ್ರೇರಣೆಗೊಂಡ ಅವರು ತಂಡದೊಂದಿಗೆ ಚರ್ಚಿಸಿ ಪ್ರಾರಂಭಿಕವಾಗಿ ಬಸವಣ್ಣನವರ ವಚನಗಳಿಗೆ ಎಐ ಸಂಗೀತ ಸಂಯೋಜನೆ ಕಾರ್ಯ ಕೈಗೊಳ್ಳುತ್ತಾರೆ.

ಬಸವಣ್ಣನವರ ಒಂದೆರಡು ವಚನಗಳ ಎಐ ಸಂಗೀತ ಸಂಯೋಜನೆಗೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದಂತೆ, 'ನಾವ್ಯಾಕೆ ಇಷ್ಟಕ್ಕೆ ಸೀಮಿತವಾಗಬೇಕು' ಎಂಬ ಪ್ರಶ್ನೆ ಈ ತಂಡವನ್ನು ಕಾಡುತ್ತದೆ. ಅಷ್ಟರಲ್ಲಾಗಲೇ ಎಐ ಸಂಗೀತ ಸಂಯೋಜನೆಯಲ್ಲಿ ಪರಿಣತಿ ಸಾಧಿಸಿದ ಗಣೇಶ್ ಮತ್ತವರ ತಂಡ ಬಸವಣ್ಣನವರ ಎಲ್ಲ 1200 ವಚನಗಳಿಗೂ ನಾನಾ ಪ್ರಕಾರಗಳಲ್ಲಿ ಎಐ ಸಂಗೀತ ಸಂಯೋಜನೆ ಮಾಡುವ ಸಾಹಸಕ್ಕೆ ಕೈಹಾಕಿ, ಯಶ ಕಾಣುತ್ತದೆ. ತಾವು ಅಂದುಕೊಂಡಂತೆ, ವಚನಗಳ ಹಾವಭಾವಕ್ಕೆ ತಕ್ಕಂತೆ, ಸಂಗೀತದಲ್ಲಿ ಮಾಡ್ಯುಲೇಷನ್ ಮಾಡಿ ವಿಡಿಯೊಗಳನ್ನು ಪರಿಣಾಮಕಾರಿಯಾಗಿ ರೂಪಿಸುತ್ತಾರೆ. ಅವುಗಳೆಲ್ಲವನ್ನೂ ಒಂದೊಂದಾಗಿಯೇ ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡತೊಡಗಿದ್ದಾರೆ.

ಈ ಪ್ರಯತ್ನದ ಬಗ್ಗೆ ಹೆಮ್ಮೆಪಡುವ ಗಣೇಶ್, 'ಎಐ ಹೊಸ ಲೋಕ ತೆರೆದಿಟ್ಟಿದೆ. ಹೊಸ ಅವಕಾಶ ಕಲ್ಪಿಸಿಕೊಟ್ಟಿದೆ. ಅದನ್ನು ಬಳಸಿಕೊಂಡು ನಾವು ಸಂಗೀತ ಹಾಗೂ ದೃಶ್ಯದ ಮೂಲಕ ಕನ್ನಡ ಸಾಹಿತ್ಯಲೋಕವನ್ನು ಜನರ ಮುಂದಿಡುತ್ತಿದ್ದೇವೆ. ಬಸವಣ್ಣನವರ ವಚನಗಳ ಮೂಲಕ ಶುರು ಮಾಡಿದ ಈ ಕಾರ್ಯವು ಇಂದು ನಾನಾ ಟಿಸಿಲೊಡೆದು ಸಾವಿರಾರು ಎಐ ಸಂಗೀತ ಸೃಷ್ಟಿಗೆ ನಾಂದಿ ಹಾಡಿದೆ' ಎನ್ನುತ್ತಾರೆ.




ಹಿಂದೂಸ್ತಾನಿ, ಕರ್ನಾಟಕ ಸಂಗೀತ ಸೇರಿದಂತೆ ಇಂದಿನ ಯುವಜನರ ಟ್ರೆಂಡ್ ಆಗಿರುವ ಡಿಜೆ ಪ್ರಕಾರದಲ್ಲೂ ಎಐ ಸಂಗೀತ ರೂಪಿಸಲಾಗಿದೆ. ನಮ್ಮ ಪ್ರಯತ್ನ